ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

ಸಂ. ಗಣಕಶಾಖೆ/ಎನ್.ಐ.ಓ.ಎಸ್/01/2018-19 ದಿನಾಂಕ 13/11/2018

## -ಜ್ಞಾಪನ -

ವಿಷಯ : ಎಸ್.ಎಸ್.ಎಲ್.ಸಿ ಯಲ್ಲಿ ಅನುತ್ತೀರ್ಣರಾದವರಿಗೆ ಎನ್.ಐ.ಓ.ಎಸ್ ಮೂಲಕ ಪರೀಕ್ಷೆಗೆ ಹಾಜರಾಗಲು ಅವಕಾಶವಿರುವ ಕುರಿತು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡುವ ಬಗ್ಗೆ

ಉಲ್ಲೇಖ : ಎನ್.ಐ.ಓ.ಎಸ್ ವಿಷಯವಾರು ಪರೀಕ್ಷಾ ಸೂಚಿ ಪಟ್ಟಿ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವತಿಯಿಂದ ನಡೆಯುವ ವಾರ್ಷಿಕ ಪರೀಕ್ಷೆಗಳಿಗೆ ಪ್ರತಿ ವರ್ಷ ಸುಮಾರು 8.25 ಲಕ್ಷ ವಿದ್ಯಾರ್ಥಿಗಳು ಹಾಜರಾಗುತ್ತಿದ್ದು ಸುಮಾರು 1.25 ವಿದ್ಯಾರ್ಥಿಗಳು ಅನುತ್ತೀರ್ಣರಾಗುವುದನ್ನು ಗಮನಿಸಲಾಗಿದೆ. ವಿಷಯಗಳ ಹಾಗು ಪಠ್ಯವಸ್ತುವಿನ ಕ್ಲಿಷ್ಟತೆಯಿಂದಾಗಿ ಕೆಲ ವಿದ್ಯಾರ್ಥಿಗಳು 10ನೇ ತರಗತಿಯಲ್ಲಿ ಉತ್ತೀರ್ಣರಾಗಲು ವಿಫಲರಾಗಿ ತಮ್ಮ ವ್ಯಾಸಂಗವನ್ನು ಮುಂದುವರಿಸಲು ವಿಫಲರಾಗುತ್ತಾರೆ. ಈ ರೀತಿಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎನ್.ಐ.ಓ.ಎಸ್ (ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್) ನಲ್ಲಿ ಇರುವ ಅವಕಾಶಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಿ ಅವರುಗಳು 10ನೇ ತರಗತಿಯಲ್ಲಿ ಉತ್ತೀರ್ಣರಾಗಿ ತಮ್ಮ ವ್ಯಾಸಂಗವನ್ನು ಮುಂದುವರಿಸಲು ಅನುಕೂಲ ಮಾಡಿಕೊಡುವ ಸಲುವಾಗಿ ಈ ಜ್ಞಾಪನವನ್ನು ನೀಡಲಾಗಿದೆ.

- ರಾಜ್ಯ ಪಠ್ಯಕ್ರಮದಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಎನ್.ಐ.ಓ.ಎಸ್ ಮೂಲಕ 10 ನೇ ತರಗತಿಯ ಪರೀಕ್ಷೆಗಳನ್ನು ಎದುರಿಸಲು ಅವಕಾಶವಿದೆ.
- ಎನ್.ಐ.ಓ.ಎಸ್ ಮೂಲಕ 10 ನೇ ತರಗತಿಯ ಪರೀಕ್ಷೆಯನ್ನು ಎದುರಿಸಿದಲ್ಲಿ ಕೇವಲ ಐದು ವಿಷಯಗಳಲ್ಲಿ ಉತ್ತೀರ್ಣರಾಗುವ ಮೂಲಕ 10 ನೇ ತರಗತಿಯಲ್ಲಿ ತೇರ್ಗಡೆ ಹೊಂದಬಹುದಾಗಿದೆ.
- ಕೇವಲ 01 ಭಾಷೆ ಮತ್ತು 04 ಕೋರ್ ವಿಷಯಗಳು ಅಥವಾ 02 ಭಾಷೆ ಮತ್ತು 03 ಕೋರ್ ವಿಷಯಗಳಲ್ಲಿ ಉತ್ತೀರ್ಣರಾದರೆ ತೇರ್ಗಡೆ ಹೊಂದುವ ಅವಕಾಶವಿದೆ.
- ಪ್ರಶ್ನೆ ಪತ್ರಿಕೆಗಳು ಆಂಗ್ಲ ಮತ್ತು ಹಿಂದಿ ಭಾಷೆಗಳಲ್ಲಿದ್ದು ಉತ್ತರಗಳನ್ನು ಯಾವುದೇ ಭಾಷೆಯಲ್ಲಿ ಬರೆಯಬಹುದಾಗಿದೆ.
- ಪ್ರತಿ ವರ್ಷ ಎರಡು ಬಾರಿ ಒಮ್ಮೆ ಏಪ್ರಿಲ್ ಮಾಹೆಯಲ್ಲಿ ಮತ್ತೊಮ್ಮೆ ಅಕ್ಟೋಬರ್ ನಲ್ಲಿ ಪರೀಕ್ಷೆಗಳು ಜರುಗುತ್ತವೆ.
- ರಾಜ್ಯ ಪಠ್ಯಕ್ರಮದಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ತಾವು ಉತ್ತೀರ್ಣರಾದ ವಿಷಯಗಳನ್ನು ಹೊರತು ಪಡಿಸಿ ಉಳಿದ ವಿಷಯಗಳನ್ನು ಎನ್.ಐ.ಓ.ಎಸ್ ಪರೀಕ್ಷೆಯ ಮೂಲಕ ಎದುರಿಸಲು ಅವಕಾಶವಿದೆ. (ಟ್ರಾನ್ಸ್‌ಫರ್ ಆಫ್ ಕ್ರೆಡಿಟ್)
- ಕ್ಲಿಷ್ಟ ಎಂದು ಪರಿಗಣಿಸಲಾದ ಆಂಗ್ಲ, ವಿಜ್ಞಾನ ಹಾಗು ಗಣಿತ ವಿಷಯಗಳಿಗೆ ಪರ್ಯಾಯವಾಗಿ ಸಮಾಜಶಾಸ್ತ್ರ, ಗೃಹ ವಿಜ್ಞಾನ, ಮನೋವಿಜ್ಞಾನ, ಚಿತ್ರಕಲೆ ವಿಷಯಗಳಂತಹ 11 ವಿಷಯಗಳ ಆಯ್ಕೆಯೊಂದಿಗೆ 10 ನೇ ತರಗತಿಯನ್ನು ಪಾಸು ಮಾಡಲು ಅವಕಾಶವಿದೆ.

- ರಾಜ್ಯ ಪಠ್ಯಕ್ರಮದಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಎನ್.ಐ.ಓ.ಎಸ್ ಮೂಲಕ 10 ನೇ ತರಗತಿಯ ಪರೀಕ್ಷೆಗಳನ್ನು ತಮಗೆ ಬೇಕಾದ ಮಾಹೆಯಲ್ಲಿ ಎದುರಿಸಲು ಅವಕಾಶವಿದೆ. (ಆನ್ ಡಿಮ್ಯಾಂಡ್ ಎಕ್ಸಾಮಿನೇಶನ್)
- ಪ್ರತಿ ವಿಷಯಕ್ಕೆ ವಾರ್ಷಿಕ 30 ತರಗತಿಗಳನ್ನು ಸ್ಟಡಿ ಸೆಂಟರ್‌ಗಳಲ್ಲಿ ಹಾಜರಾಗುವ ಮೂಲಕ ಮಾರ್ಗದರ್ಶನ ಪಡೆಯಬಹುದಾಗಿದೆ.
- ನೋಂದಣಿ ಹಾಗು ಹೆಚ್ಚಿನ ವಿವರಗಳಿಗೆ www.nios.ac.in ಲಾಗ್ ಇನ್ ಮಾಡಬಹುದಾಗಿದೆ.

(ಸುಮಂಗಲ. ವಿ)
ನಿರ್ದೇಶಕರು, ಪರೀಕ್ಷೆಗಳು 14/11

ಅಗತ್ಯ ಕ್ರಮಕ್ಕಾಗಿ :

1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ
2) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಈ ಬಗ್ಗೆ ವ್ಯಾಪಕ ಪ್ರಚಾರ ನೀಡಿಲು ಸೂಚಿಸಿದೆ.